ಮುಂಚೆ ಮನೆ ಸೇರಿಕೊಳ್ಳುವ ಆತುರ ಕಾಣಿಸತೊಡಗಿತು. ಆಗ ಶುರುವಾಯಿತು ಮಳೆ.

ಜೋರು ಮಳೆ! ಧಾರಾಕಾರ ಮಳೆ! ಭೋರ್ಗರೆಯುವ ಮಳೆ!

ಮೊಗ್ಗುಗಳಂತೆ ಮುದುಡಿಕೊಂಡಿದ್ದ ಕೊಡೆಗಳು ಹೂವುಗಳಂತೆ ಅರಳಲು ಶುರುವಾದವು. ರಸ್ತೆಯ ಮೇಲೆ ಪ್ರಸ್ತುತವಿದ್ದ ನಡಿಗೆಯ ಕ್ರಮವೊಂದು ಚದುರಿ ಹೋದಂತೆ, ಇನ್ನೊಂದ್ಯಾವುದೋ ಹೊಸ ಕ್ರಮವೊಂದು ರೂಪುಗೊಂಡಂತೆ, ಅದ್ಯಾವುದೋ ಭಯದಿಂದ ಜನರು ಮುದುಡಿಕೊಂಡು ನಡೆಯುತ್ತಿರುವಂತೆ ಅನಿಸುತ್ತಿದೆ. ವಾಹನಗಳು ನಿಮ್ಮದಿಯಾಗಿ ಚಲಿಸುತ್ತಿವೆ. ರಸ್ತೆಗಳ ಮೇಲೆ ನೀರು ಸಂಗ್ರಹಗೊಳ್ಳುತ್ತಿದೆ. ಗಿಡಮರಗಳ ಕೆಳಗೆ ಜನರು ಗುಂಪುಗುಂಪಾಗಿ ಸೇರತೊಡಗಿದ್ದಾರೆ. ಅಂಗಡಿ ಮುಂಗಟ್ಟುಗಳ ಮುಂದಿನ ಕಿರಿದಾದ ಜಗುಲಿಗಳಲ್ಲಿ ತಲೆಮರೆಸಿಕೊಳ್ಳುತ್ತಿದ್ದಾರೆ. ರೇಯಿನ್ ಕೋಟುಗಳು ಮತ್ತು ಟೋಪಿಗಳು ತಮ್ಮ ಇರುವನ್ನು ಜಾಹೀರು ಮಾಡುತ್ತಿವೆ.

ಅಂಗೈಯಿಂದ ಮುಖವನ್ನು ಒರೆಸಿಕೊಂಡಂತೆ, ವೈಪರುಗಳು ಕಾರಿನ ಗಾಜುಗಳನ್ನು ಒರೆಸುತ್ತಿವೆ. ತೊಯ್ಯುವುದು ತಪ್ಪುವುದಿಲ್ಲವೆಂದು ತಿಳಿದೂ, ಕೆಲವರು ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. 'ಇನ್ನು ತೊಯ್ದರಾಯಿತು ಬಿಡು' ಎಂದು ಮಾನಸಿಕವಾಗಿ ಸಿದ್ಧವಾದಾಗ ಯಾವ ಒತ್ತಡವೂ ಇರುವುದಿಲ್ಲ. ಅದಕ್ಕೇ ತೊಯ್ಯುತ್ತಿದ್ದೇನೆ. ಮಳೆಯನ್ನು ಪಾಂಗಿತವಾಗಿ ಅನುಭವಿಸುತ್ತಿದ್ದೇನೆ. ಎಂತಹ ಮಳೆಯಿದು!

ನವಯುವತಿಯೊಬ್ಬಳು ಮೊದಲಬಾರಿಗೆ ಅಂಗಳದಲ್ಲಿ ಸೆಗಣಿನೀರು ಚೆಲ್ಲುವಾಗ ಆಗುವ ಏರಿಳಿತದ ನೀರಿನ ಸಿಂಪಡಣೆಯಂತೆ ಒಂದೊಂದು ಸಲ ಅನಿಸುತ್ತದೆ. ಸುರಿಯಿತ್ತಿರುವುದು ಸೂಜಿಗಳ ಸುರಿಮಳೆಯೇನೋ ಎಂದು ಮತ್ತೊಂದು ಸಲ ಅನಿಸುತ್ತದೆ. ತಕ್ಷಣವೇ ಹೂಮಳೆಯೇನೋ ಎನ್ನುವಂತೆ ಮೃದುವಾಗಿ ತಾಕತೊಡಗುವ ಹನಿಗಳು. ಅಷ್ಟರಲ್ಲೇ ತಲೆಯ ಮೇಲೆ ಬೆಣಚುಕಲ್ಲುಗಳ ಸುರಿಮಳೆ.

ಪ್ಯಾಂಟಿನ ತುದಿಗಳು ತೋಯುತ್ತಿವೆ. ದಾವಣಿ ಹೊದ್ದುಕೊಂಡ ಹುಡುಗಿಯರು ಅವಸರವಸರವಾಗಿ ನಡೆಯುತ್ತಿದ್ದಾರೆ. ಹೆಂಗಸೊಬ್ಬಳ ಬೊಟ್ಟು ನೀರಿನಲ್ಲಿ ಕರಗಿ ಹೋಗುತ್ತಿದೆ. ತಳ್ಳುಬಂಡಿಯೊಂದರಿಂದ ಪೊಟ್ಟಣವೊಂದು ರಸ್ತೆಯ ಮೇಲೆ ಜಾರಿ ಬಿತ್ತು. ಇನ್ಯಾರೋ ಅದನ್ನು ಎತ್ತಿ ಕೊಟ್ಟಾಗ, ಅದು ಹಸಿಯಾಯಿತೇನೋ ಎಂದು ಪರೀಕ್ಷಿಸುತ್ತಿರುವಂತೆಯೇ, ತಳ್ಳುಬಂಡಿಯವನ ಮುಖದಲ್ಲಿ ಆತಂಕಮಿಶ್ರಿತ ಕೃತಜ್ಞತೆಯ ಕಿರುನಗೆ.

ಬಸ್ಸಿನ ಕಿಟಕಿಗಳು ಮುಚ್ಚಿಕೊಂಡಿವೆ. ಯಾರಾದರೂ ಖಾಲಿ ಮಾಡಿದ ಸೀಟಿನಲ್ಲಿ ಈಗ ಬೆಚ್ಚಗೆ ಕೂಡಬಹುದು.

ತೆಂಗಿನಕಾಯಿಯೊಂದು ದೊಪ್ಪೆಂದು ನೆಲಕ್ಕೆ ಬಿತ್ತು. ಮರದಲ್ಲಿನ ಕೊನೆಯ ಮಾವಿನಕಾಯಿ ಟಪಕ್ಕನೆ ತೊಟ್ಟು ಕಳಚಿ ಬಿತ್ತು. ಅರವಟ್ಟಿಗೆಯೊಳಗಿನ ಮಣ್ಣಿನ ಕುಡಿಕೆಗಳೆಲ್ಲಾ ಖಾಲಿ ಖಾಲಿಯಾಗಿವೆ. ಈಗ ಅವುಗಳ ಅವಶ್ಯಕತೆ ಇಲ್ಲ. ನಿಜವಾಗಿಯೂ ಇಲ್ಲವಾ?

ನಾಯಿಯೊಂದು ಬೆಚ್ಚನೆಯ ತಾವಿಗಾಗಿ ತಡಕಾಡುತ್ತಿದೆ. ಮಿರ್ಚಿ ಬಜ್ಜಿಗಳು ಬಿಸಿಬಿಸಿಯಾಗಿ ಕರಿಯಲ್ಪಡುತ್ತಿವೆ. ಬಿಸಿ ದ್ರಾವಣಗಳು ಗಂಟಲಲ್ಲಿ ಬೆಚ್ಚಗೆ ಇಳಿಯುತ್ತಿವೆ. ನಸುಕು ಹೊತ್ತಲ್ಲಿ ತಂತಿಯ ಮೇಲೆ ಮಂಜಿನ ಹನಿಗಳು ಸಾಲುಗಟ್ಟಿದಂತೆ, ಜನರ ತಲೆಗಳ ಮೇಲೆ ನೀರಿನ ಹನಿಗಳು.

ತೊಯ್ದ ಕಸದ ತೊಟ್ಟಿ ದುರ್ಗಂಧ ಸೂಸುತ್ತಿದೆ. ಬಸ್‌ಸ್ಟಾಪಿನಲ್ಲಿ ಭಿಕ್ಷುಕನೊಬ್ಬ ಬೀಡಿ ಹಚ್ಚಲು ಶತಪ್ರಯತ್ನ ಪಡುತ್ತಿದ್ದಾನೆ. ತಳ್ಳುಬಂಡಿಯಲ್ಲಿನ ಪನ್ನೇರಳೆ ಹಣ್ಣುಗಳು ನೆನೆಯುತ್ತಿವೆ. ಕಟ್ಟಡವೊಂದರ ದೋಣಿಯಿಂದ ಮಳೆನೀರು ಸುರಿಯುತ್ತಿದೆ. ಹುಡುಗನೊಬ್ಬ ಆ ನೀರಿಗೆ ಕೈಯೊಡ್ಡಿ ಆಡುತ್ತಿದ್ದಾನೆ.